‘ಆಚಾರಧರ್ಮ’ ಗ್ರಂಥಮಾಲಿಕೆ : ಸಾತ್ತ್ವಿಕ ಕೇಶಾಲಂಕಾರ - ಖಂಡ ೫

# ಕೇಶರಚನೆ ಹೇಗಿರಬೇಕು ?

(How should the hairstyles be ?)

ಕನ್ನಡ (Kannada)

**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

(‘ಸಚ್ಚಿದಾನಂದ ಪರಬ್ರಹ್ಮ’ ಬಿರುದಿನ ಸ್ಪಷ್ಟೀಕರಣವನ್ನು ‘ಪುಟ ೮’ ರಲ್ಲಿ ಓದಿ.)

**ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ**

**ಸೂಕ್ಷ್ಮಜ್ಞಾನ ಪಡೆದವರು**

**ಸೌ. ಪ್ರಿಯಾಂಕಾ ಸುಯಶ ಗಾಡಗೀಳ ಮತ್ತು**

**ಸೌ. ರಂಜನಾ ಗೌತಮ ಗಡೇಕರ್**

**ಸನಾತನ ಸಂಸ್ಥೆ**

**ಸನಾತನದ ಗ್ರಂಥಸಂಪತ್ತಿನ ಅದ್ವಿತೀಯತೆ !**

ಸನಾತನದ ಬಹುತೇಕ ಗ್ರಂಥಗಳಲ್ಲಿನ ಸುಮಾರು ಶೇ. ೨೦ ರಷ್ಟು ಬರವಣಿಗೆಗಳು ‘ಸೂಕ್ಷ್ಮದಿಂದ ಪಡೆದುಕೊಂಡ ದಿವ್ಯ ಜ್ಞಾನ’ವಾಗಿದ್ದು, ಪೃಥ್ವಿಯಲ್ಲಿ ಲಭ್ಯವಿರುವ ಜ್ಞಾನದ ತುಲನೆಯಲ್ಲಿ ಅದು ಅದ್ವಿತೀಯವಾಗಿದೆ !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಶ್ರೀ. ಅಜಯ ಪಿಂಗಳೆ, ಸೌ. ಜಾಹ್ನವಿ ಶಿಂದೆ ಮತ್ತು
ಶ್ರೀ. ಗುರುದಾಸ ಸದಾನಂದ ಖಂಡೇಪಾರಕರ್

**First Edition** : Sri Ramana Maharshi Punyatithi,
Kaliyug Varsh 5114 (14th April 2012)

**Second Edition** : Holi, Kaliyug Varsh 5124
(6th March 2023)

Translated from the original Marathi text ‘Kesharachana kashi asavi ?’

**ಅನುವಾದಕರು** : ಶ್ರೀ. ಗಣೇಶ ರಾಜಾರಾಮ ಕಾಮತ್, ಡಾ. ಪ್ರಕಾಶ ಘಾಳಿ

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 120/-

**ISBN :** 978-93-87641-96-9

ಗ್ರಂಥ ಕ್ರ. : 165

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ವಿಷಯಸೂಚಿ

೧. ಗ್ರಂಥದ ಸಂಕಲನಕಾರರ ಪರಿಚಯ ೬
೨. ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೯
೩. ಮನೋಗತ ೧೪

---

## ಪ್ರಸ್ತುತ ಗ್ರಂಥದ ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)

**೧. ಕೇಶರಚನೆ** ೧೬
* ಕೇಶರಚನೆಯ ಅಧ್ಯಾತ್ಮಶಾಸ್ತ್ರೀಯ ಮಹತ್ವ ೧೬
**೨. ಬೈತಲೆಯನ್ನು ತೆಗೆಯುವುದು** ೧೮
* ಪುರುಷರು ಮತ್ತು ಸ್ತ್ರೀಯರು ಬೈತಲೆಯನ್ನು ಎಲ್ಲಿ ತೆಗೆಯಬೇಕು ? ೧೮
* ಶಾರೀರಿಕ ಸೌಂದರ್ಯಕ್ಕಿಂತ ಧರ್ಮಾಚರಣೆ ಮಹತ್ವದ್ದು ೨೪
**೩. ಶಾಲಾ ಬಾಲಕಿಯರು ದೊಡ್ಡವರಂತೆ, ಹಾಗೆಯೇ ಪಾಶ್ಚಾತ್ಯರಂತೆ ಮಾಡುವ ಕೇಶರಚನೆ** ೩೨
* ಶಾಲಾ ಬಾಲಕಿಯರು ದೊಡ್ಡವರಂತೆ, ಹಾಗೆಯೇ ಪಾಶ್ಚಾತ್ಯಶೈಲಿಯ ಕೇಶರಚನೆ ಮಾಡುವುದರಿಂದ ಆಗುವ ಹಾನಿ ೩೨
**೪. ಪುರುಷರ ಅಸಾತ್ತ್ವಿಕ ಕೇಶರಚನೆ** ೩೩
* ಪುರುಷಪ್ರಧಾನ ಪ್ರಕೃತಿಯು ಅವರಿಗೆ ಶೋಭಿಸದ ಕೇಶರಚನೆಯನ್ನು ಮಾಡಿಕೊಳ್ಳುವುದರಿಂದ ಆಗುವ ಹಾನಿ ಮತ್ತು ಅದರ ಪರಿಣಾಮಗಳು ೩೩
**೫. ಸ್ತ್ರೀಯರ ಅಸಾತ್ತ್ವಿಕ ಕೇಶರಚನೆ** ೩೪
* ಸ್ತ್ರೀಯರು ಕೂದಲನ್ನು ಹಾಗೆ ಏಕೆ ಬಿಡಬಾರದು ? ೩೪
* ಹಾಗೇ ಬಿಟ್ಟ ಉದ್ದ ಕೂದಲಿನ ಸೂಕ್ಷ್ಮಜ್ಞಾನದ ಪ್ರಯೋಗ ೩೬
**೬. ಸ್ತ್ರೀಯರ ಸಾತ್ತ್ವಿಕ ಕೇಶರಚನೆ** ೫೫
* ಸ್ತ್ರೀಯರ ಸಾತ್ತ್ವಿಕ ಕೇಶರಚನೆಯ ವಿಧಗಳು ೫೫
* ಎರಡು ಜಡೆಗಳನ್ನು ಯಾರು ಹಾಕಿಕೊಳ್ಳಬೇಕು ? ೬೮

**೭. ವಿವಿಧ ಕೇಶರಚನೆಗಳ ತುಲನೆ** **೭೪**

**೮. ಕೇಶರಚನೆಯನ್ನು ಅಸಾತ್ತ್ವಿಕವಾಗಿಸುವ ಪದ್ಧತಿಗಳು / ವಸ್ತುಗಳು** **೯೬**

* ತುರುಬಿಗೆ ಜಾಲರಿಯನ್ನು ಏಕೆ ಕಟ್ಟಬಾರದು ೯೮

* ಮೊದಲೇ ಸಿದ್ಧಪಡಿಸಿದ ಕೇಶರಚನೆಗಳ ಹಾನಿಗಳು ೯೯

**೯. ಅಸಾತ್ತ್ವಿಕ ಮತ್ತು ಸಾತ್ತ್ವಿಕ ಕೇಶರಚನೆಗಳ ಪರಿಣಾಮ** **೧೦೧**

**೧೦. ಕೇಶಾಲಂಕಾರ ಮಾಡುವುದು** **೧೦೨**

* ಕೂದಲುಗಳಲ್ಲಿ ಬಂಗಾರದ ಜಡೆಬಿಲ್ಲೆಗಳನ್ನು ಧರಿಸುವುದರಿಂದಾಗುವ ಲಾಭಗಳು ೧೧೦

* ಮಾಸಿಕ ಸರದಿಯ ಸಮಯದಲ್ಲಿ ಸ್ತ್ರೀಯರು ತಲೆಯಲ್ಲಿ ಹೂವುಗಳನ್ನು ಏಕೆ ಮುಡಿಯಬಾರದು ? ೧೧೨

**೧೧. ಉನ್ನತ ಸಾಧಕರು ಮತ್ತು ಸಂತರ ಸಂದರ್ಭದಲ್ಲಿ ಕೇಶರಚನೆಗೆ ವಿಶೇಷ ಮಹತ್ವವಿರುವುದಿಲ್ಲ** **೧೧೪**

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ** **೧೧೫**


**ಪರಾತ್ಪರ ಗುರು ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾದ ಸದ್ಗುರು (ಸೌ.) ಬಿಂದಾ ಸಿಂಗಬಾಳ ಮತ್ತು ಸದ್ಗುರು (ಸೌ.) ಅಂಜಲಿ ಗಾಡಗೀಳ ಇವರ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದು ಸೇರಿಸಿರುವುದರ ಹಿಂದಿನ ಕಾರಣ**

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳು ಸನಾತನಕ್ಕೆ ಮಾರ್ಗದರ್ಶನ ಮಾಡುತ್ತಾರೆ. ೧೩.೫.೨೦೨೦ ರಂದು ಸಪ್ತರ್ಷಿಗಳು, 'ಇನ್ನು ಮುಂದೆ ಸದ್ಗುರು (ಸೌ.) ಬಿಂದಾ ಸಿಂಗಬಾಳರನ್ನು 'ಶ್ರೀಸತ್‌ಶಕ್ತಿ (ಸೌ.) ಬಿಂದಾ ಸಿಂಗಬಾಳ' ಮತ್ತು ಸದ್ಗುರು (ಸೌ.) ಅಂಜಲಿ ಗಾಡಗೀಳರನ್ನು 'ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಗಾಡಗೀಳ' ಎಂದು ಸಂಬೋಧಿಸಬೇಕು; ಏಕೆಂದರೆ ಈ ಹೆಸರುಗಳಿಂದ ಇಬ್ಬರಿಗೂ ದೇವಿತತ್ತ್ವ ಸಿಗುವುದು, ಹಾಗೆಯೇ ಆ ರೀತಿ ಉಲ್ಲೇಖಿಸುವವರಿಗೂ ಇದರ ಲಾಭವಾಗುವುದು' ಎಂದು ಹೇಳಿದ್ದಾರೆ. ಸಪ್ತರ್ಷಿಗಳ ಆಜ್ಞೆಗನುಸಾರ ಈ ರೀತಿ ಸಂಬೋಧನೆ ಮಾಡಲಾಗುತ್ತಿದೆ. ಇವರ ಹೆಸರಿನ ಸಂಬೋಧನೆಯ ಬಗ್ಗೆ ಪರಾತ್ಪರ ಗುರು ಡಾ. ಆಠವಲೆಯವರು "ಶ್ರೀಸತ್‌ಶಕ್ತಿ'ಯು ಭಗವಂತನ ಶಾಶ್ವತ ಸ್ವರೂಪಕ್ಕೆ ಸಂಬಂಧಿಸಿದೆ ಮತ್ತು 'ಶ್ರೀಚಿತ್‌ಶಕ್ತಿ'ಯು ಭಗವಂತನ ವೈಶ್ವಿಕ ಜ್ಞಾನಕ್ಕೆ ಸಂಬಂಧಿಸಿದೆ" ಎಂದು ಹೇಳಿದರು.

# ವಿಷಯಸೂಚಿಯಲ್ಲಿನ ಕ್ರಮಾಂಕ ೩

## ಮನೋಗತ

೧೯೬೦-೭೦ ರ ದಶಕದಲ್ಲಿ ರಾಜೇಶ ಖನ್ನಾ ಎಂಬ ನಟನು ತಲೆಯ ಮಧ್ಯಭಾಗದಲ್ಲಿ ಬೈತಲೆ ತೆಗೆಯುತ್ತಾನೆಂದು ಕೆಲವು ಪುರುಷರೂ ತಲೆಯ ಮಧ್ಯ ಭಾಗದಲ್ಲಿ ಬೈತಲೆ ತೆಗೆಯಲು ಪ್ರಾರಂಭಿಸಿದರು. 'ಸಾಧನಾ' ಎಂಬ ನಟಿಯು ಹಣೆಯ ಮೇಲೆ ಕೂದಲುಗಳನ್ನು ತೆಗೆದುಕೊಂಡು ಅವುಗಳನ್ನು ಕತ್ತರಿಸುತ್ತಿದ್ದಳು; ಆದುದರಿಂದ 'ಸಾಧನಾ ಕಟ್' ಎಂಬ ಹೆಸರಿನ ಕೇಶರಚನೆಯನ್ನು ಹೊಸಶೈಲಿಯೆಂದು (ಫ್ಯಾಷನ್ ಎಂದು) ಆ ಕಾಲದ ಸ್ತ್ರೀಯರು ಅನುಕರಿಸತೊಡಗಿದರು. ಚಲನಚಿತ್ರಗಳ ಅಥವಾ ಪಾಶ್ಚಾತ್ಯರನ್ನು ಅನುಕರಿಸುವ ವೃತ್ತಿಯಿಂದಾಗಿ ಹೆಚ್ಚುಕಡಿಮೆ ಇಡೀ ಸಮಾಜವು ಕೇಶ ರಚನೆಯ ವಿಷಯದಲ್ಲಿ ವಿವಿಧ ಹೊಸಶೈಲಿಗಳಿಗೆ ನಿಧಾನವಾಗಿ ಬಲಿಯಾಯಿತು !

ಪುರುಷರು ಎಡಬದಿಗೆ ಮತ್ತು ಸ್ತ್ರೀಯರು ಮಧ್ಯದಲ್ಲಿ ಬೈತಲೆ ತೆಗೆಯುವುದು, ಹಾಗೆಯೇ ಕೂದಲುಗಳನ್ನು ಸ್ವಚ್ಛಂದವಾಗಿ ಬಿಡದೇ ತುರುಬು (ಮುಡಿ), ಹೆರಳಿ ನಂತಹ ಸಾತ್ತ್ವಿಕ ಕೇಶರಚನೆಯ ಆಚಾರವನ್ನು ಹಿಂದೂ ಧರ್ಮವು ಪ್ರಾಚೀನ ಕಾಲ ದಿಂದ ಕಲಿಸಿಕೊಟ್ಟಿದೆ. 'ಆಚಾರಃ ಪರಮೋ ಧರ್ಮಃ ।' ಆಚಾರಪಾಲನೆಯಿಂದ ಧರ್ಮ ಪಾಲನೆಯಾಗಿ ಮನುಷ್ಯನ ವೃತ್ತಿಯು ಸತ್ತ್ವಗುಣಿಯಾಗುತ್ತದೆ. ಬದಲಾಗಿ ಪಾಶ್ಚಾತ್ಯ ರಂತೆ ಹೊಸರೂಢಿಗಳನ್ನು ಅಂಗೀಕರಿಸಿದರೆ ಮನುಷ್ಯನ ವೃತ್ತಿಯು ತಮೋಗುಣಿ ಯಾಗುತ್ತದೆ. ಹೊಸರೂಢಿ (ಫ್ಯಾಷನ್) ಯೆಂದು ಅಸಾತ್ತ್ವಿಕ ಕೇಶರಚನೆ ಮಾಡಿದರೆ ಸ್ತ್ರೀ-ಪುರುಷರು ಕೆಟ್ಟ ಶಕ್ತಿಗಳ ಆಕ್ರಮಣಗಳಿಗೆ ಬಲಿಯಾಗುವ ಸಾಧ್ಯತೆಯಿರುತ್ತದೆ.

ಈ ಗ್ರಂಥದಲ್ಲಿ ಸ್ತ್ರೀಯರು 'ಪೋನಿಟೇಲ್', 'ಫ್ರೆಂಚ್‌ರೋಲ್' 'ಬಾಯ್‌ಕಟ್' ನಂತಹ ಅಸಾತ್ತ್ವಿಕ ಕೇಶರಚನೆಯನ್ನು ಏಕೆ ಮಾಡಬಾರದು ಎಂಬುದನ್ನು ಹೇಳುವುದ ರೊಂದಿಗೆ, ಚಿಕ್ಕ ಹುಡುಗಿಯರು ಎರಡು ಜಡೆ, ವಯಸ್ಸಿಗೆ ಬಂದ ಮೇಲೆ ಒಂದು ಜಡೆಯನ್ನು ಹೆಣೆಯುವುದು, ಸ್ತ್ರೀಯರು ತುರುಬನ್ನು ಕಟ್ಟಿಕೊಳ್ಳುವುದು ಮುಂತಾದ ಸಾತ್ತ್ವಿಕ ಕೇಶರಚನೆಯ ವಿಷಯದಲ್ಲಿ ಶಾಸ್ತ್ರೀಯ ಜ್ಞಾನವನ್ನು ನೀಡಲಾಗಿದೆ. ಕೇಶರಚನೆಯ ವಿಷಯದಲ್ಲಿಯೂ ಸಹ ಇಷ್ಟೊಂದು ಆಳವಾದ ವಿಚಾರವನ್ನು ಹಿಂದೂ ಧರ್ಮವು ಮಾಡಿರುವುದನ್ನು ನೋಡಿ ಹಿಂದೂ ಧರ್ಮದ ಎದುರು ನತಮಸ್ತಕವಾಗಬೇಕೆನಿಸುತ್ತದೆ.

ಸ್ತ್ರೀಯರು ಸಾತ್ತ್ವಿಕ ಕೇಶರಚನೆಗಳಲ್ಲಿ (ಉದಾ. ಜಡೆ, ತುರುಬು) ಯಾವುದೇ ಕೇಶರಚನೆಯನ್ನು ಮಾಡಬಹುದು; ಆದರೆ ಆ ಕೇಶರಚನೆಯನ್ನು

ಸುಶೋಭಿತಗೊಳಿಸಲು ವಿಚಿತ್ರ ಆಕಾರಗಳ ಕ್ಲಿಪ್, ಶೋಭೆಯ ವಿದೇಶೀ ಹೂವು ಮುಂತಾದವುಗಳನ್ನು ಉಪಯೋಗಿಸುವುದು ಅಯೋಗ್ಯವಾಗಿದೆ. ಸ್ತ್ರೀಯರು ಕೂದಲುಗಳಲ್ಲಿ ಮುಡಿಯಲು ಯಾವ ಎಲೆ-ಹೂವುಗಳನ್ನು ಉಪಯೋಗಿಸಬೇಕು ಎನ್ನುವುದರ ವಿವರಣೆಯನ್ನೂ ಈ ಗ್ರಂಥದಲ್ಲಿ ನೀಡಲಾಗಿದೆ. ಸಾತ್ತ್ವಿಕ ಕೇಶರಚನೆಯನ್ನು ಮಾಡಿದ ವ್ಯಕ್ತಿಗೆ ಆಧ್ಯಾತ್ಮಿಕ ಲಾಭವಂತೂ ಆಗುತ್ತದೆ, ಅದರೊಂದಿಗೆ ಇಂತಹ ಕೇಶರಚನೆಯಿಂದ ಸಾತ್ತ್ವಿಕ ಲಹರಿಗಳು ಪ್ರಕ್ಷೇಪಿಸುವುದರಿಂದ ಇಂತಹ ಕೇಶರಚನೆಯನ್ನು ನೋಡುವವರ ಮನೋದೇಹದ ಮೇಲೆಯೂ (ಮನಸ್ಸಿನ ಮೇಲೆ) ಒಳ್ಳೆಯ ಪರಿಣಾಮವಾಗುತ್ತದೆ.

ಈ ಗ್ರಂಥವನ್ನು ಓದಿ ಅಸಾತ್ತ್ವಿಕ ಕೇಶರಚನೆಯ ದುಷ್ಪರಿಣಾಮಗಳನ್ನು ತಿಳಿದುಕೊಂಡು ಲಾಭದಾಯಕವಾಗಿರುವ ಸಾತ್ತ್ವಿಕ ಕೇಶರಚನೆಯನ್ನು ಮಾಡುವ ಸದ್ಬುದ್ಧಿಯು ಎಲ್ಲ ಸ್ತ್ರೀ-ಪುರುಷರಿಗೆ ಲಭಿಸಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! – **ಸಂಕಲನಕಾರರು**

## ಸನಾತನದ ಚೈತನ್ಯಮಯ ಗ್ರಂಥಸಂಪತ್ತಿನ ಮುಖ್ಯ ವೈಶಿಷ್ಟ್ಯಗಳು !

- ಅಧ್ಯಾತ್ಮದ ಬಗೆಗಿನ ವಿವಿಧ ಗ್ರಂಥಗಳಲ್ಲಿನ ಸುಮಾರು ಶೇ. ೩೦ ರಷ್ಟು ವಿಷಯವು ಆಧಾರ ಗ್ರಂಥದಲ್ಲಿನ ವಿಷಯಗಳಾಗಿವೆ, ಸುಮಾರು ಶೇ. ೨೦ ರಷ್ಟು ವಿಷಯವು ಸಾಧಕರಿಗೆ ಸೂಕ್ಷ್ಮದಲ್ಲಿ ದೊರೆತ ಈಶ್ವರೀ ಜ್ಞಾನವಾಗಿದೆ ಮತ್ತು ಶೇ. ೫೦ ರಷ್ಟು ವಿಷಯವು ಗ್ರಂಥದ ಸಂಕಲನಕಾರರಾದ ಪರಾತ್ಪರ ಗುರು ಡಾ. ಆಠವಲೆಯವರಿಗೆ ಗುರುಗಳ ಆಶೀರ್ವಾದದಿಂದ ಅಂತರ್ಯದಿಂದ ಹೊಳೆದ ವಿಷಯವಾಗಿದೆ.
- ಅಧ್ಯಾತ್ಮದಲ್ಲಿನ ಪ್ರತಿಯೊಂದರ ಬಗ್ಗೆ 'ಏಕೆ ಮತ್ತು ಹೇಗೆ' ಎಂಬ ಉತ್ತರಗಳು !
- ವಿಜ್ಞಾನಯುಗದ ವಾಚಕರಿಗೆ ಅರ್ಥವಾಗುವಂತಹ ಆಧುನಿಕ ವೈಜ್ಞಾನಿಕ ಭಾಷೆಯಲ್ಲಿನ (ಉದಾ. ಕೋಷ್ಟಕ, ಶೇಕಡಾವಾರು) ಜ್ಞಾನ !
- ಅಧ್ಯಾತ್ಮದಲ್ಲಿನ ವಿವಿಧ ವಿಷಯಗಳ ಸಂದರ್ಭದಲ್ಲಿ ವೈಜ್ಞಾನಿಕ ಉಪಕರಣಗಳ ಮೂಲಕ ಮಾಡಿದ ಸಂಶೋಧನೆ, ಸೂಕ್ಷ್ಮಸ್ತರದಲ್ಲಿನ ಪ್ರಕ್ರಿಯೆಯನ್ನು ತೋರಿಸುವ ಚಿತ್ರಗಳು ಮತ್ತು ಬರವಣಿಗೆಗಳು !
- ಸಾಧನೆಯ ಬಗ್ಗೆ ತಾತ್ತ್ವಿಕ ವಿವೇಚನೆಯಷ್ಟೇ ಅಲ್ಲದೆ ಸಾಧನೆಯನ್ನು ಕೃತಿಯಲ್ಲಿ ತರುವ ಬಗ್ಗೆ ಪ್ರಾಯೋಗಿಕ ಮಾರ್ಗದರ್ಶನ !